
# ಕರುಣಾಮೂರ್ತಿ ಶ್ರೀರಾಮಕೃಷ್ಣ

ಸ್ವಾಮಿ ತ್ಯಾಗೀಶ್ವರಾನಂದ



**ಸಾ**ಮಾನ್ಯವಾಗಿ ಒಬ್ಬ ವ್ಯಕ್ತಿಯ ಪೂರ್ಣವ್ಯಕ್ತಿತ್ವ ಪ್ರಕಟವಾಗಲು ಸ್ವಲ್ಪ ಸಮಯ ಅತ್ಯಗತ್ಯ. ಅಂತಹ ವ್ಯಕ್ತಿತ್ವವು ಬಾಲ್ಯ, ಕೌಮಾರ, ಯೌವನ ಇತ್ಯಾದಿ ಅವಸ್ಥೆಗಳಿಗೆ ತಕ್ಕಂತೆ ಬೆಳೆದು, ಉತ್ತಮ ಸಂಗದಿಂದ ಉದಾತ್ತ ಗುಣಗಳನ್ನು ಮೈಗೂಡಿಸಿಕೊಂಡು, ನಡೆನುಡಿಗಳಿಂದ ಹೊರ ಜಗತ್ತಿಗೆ ಪರಿಚಯವಾಗುವುದು ಸರ್ವೇಸಾಮಾನ್ಯವಾದ ವಿಷಯ. ಅದರಂತೆಯೇ ಶ್ರೀರಾಮಕೃಷ್ಣರ ಕರುಣೆ, ಅನುಕಂಪ, ಸಹಾನುಭೂತಿ, ಸತ್ಯನಿಷ್ಠೆ – ಇವೆಲ್ಲ ಎಳೆಯ ವಯಸ್ಸಿನಲ್ಲಿಯೇ ಅವರ ಜೀವನದಲ್ಲಿ ಹಾಸುಹೊಕ್ಕಾಗಿ ತುಂಬಿಕೊಂಡಿದ್ದವು. ಅವು ಕಾಲಕಳೆದಂತೆ ಪರಿಪೂರ್ಣ ರೂಪದಲ್ಲಿ ವ್ಯಕ್ತವಾದವು. ಅಂತಹ ಗುಣಗಳಲ್ಲಿ ಅವರ ಅನುಕಂಪವೂ ಒಂದು. ಶ್ರೀರಾಮಕೃಷ್ಣರ ಜೀವನದಲ್ಲಿ ಆ ಕರುಣೆಯ ಗಂಗೆ ಹೇಗೆ ತುಂಬಿ ಹರಿಯಿತೆಂಬುದನ್ನು ಈಗ ನೋಡೋಣ:

೧. ಧನಿ ಕಾಮಾರಿಣಿ ಎಂಬ ವೃದ್ಧ ಮಹಿಳೆ ಶ್ರೀರಾಮಕೃಷ್ಣರ ನರಲೀಲೆಯ ಆರಂಭದಲ್ಲಿ ಬರುವ ಒಂದು ಪಾತ್ರ. ಆಕೆ ವಿದ್ಯಾವಂತೆಯಲ್ಲ, ಶ್ರೀಮಂತಳಲ್ಲ. ಯಾವುದೇ ರೀತಿಯ ಸಾಮಾಜಿಕ ಮಾನ್ಯತೆ ಪಡೆದವಳೂ ಅಲ್ಲ. ಆದರೆ ಅವಳು ಸರಳತೆ, ಕರ್ತವ್ಯನಿಷ್ಠೆಗಳ ಗಣಿ; ಗದಾಧರನಲ್ಲಿ ಪುತ್ರವಾತ್ಸಲ್ಯವನ್ನು ಹೊಂದಿದ್ದ ಪುಣ್ಯವಂತೆ. ಉಪನಯನ ಕಾರ್ಯಕ್ರಮದಲ್ಲಿ ಪ್ರಥಮ ಭಿಕ್ಷೆಯನ್ನು ತನ್ನಿಂದ ಸ್ವೀಕರಿಸಬೇಕೆಂದು ಗದಾಧರನನ್ನು ಅವಳು ಕೇಳಿಕೊಂಡಿದ್ದಳು. ಗದಾಧರನಿಗೆ ಆಗ ಕೇವಲ ೯ ವರ್ಷ. ಸರಳ ವ್ಯಕ್ತಿತ್ವದ ಗದಾಧರ ಒಪ್ಪಿಕೊಂಡ. **'ಭಾವಗ್ರಾಹಿ ಜನಾರ್ದನ'** ಎಂಬ ಮಾತಿಗೆ ತಕ್ಕಂತೆ ಗದಾಧರ, ಧನಿ ಕಾಮಾರಿಣಿಯ ಮೇಲಿನ ಕರುಣೆಯಿಂದ ಇದಕ್ಕೆ ಒಪ್ಪಿಕೊಂಡಿದ್ದ. ಕೊಟ್ಟ ಮಾತನ್ನು ಉಳಿಸಿಕೊಳ್ಳಲು, ಮುಂದೆ ಉಂಟಾದ ಅನೇಕ ತೊಡಕುಗಳನ್ನು ತನ್ನ ದೃಢನಿರ್ಧಾರದಿಂದಲೇ ಪರಿಹರಿಸಿಬಿಟ್ಟ. ಹೀಗೆ ಶ್ರೀರಾಮಕೃಷ್ಣರು ವೃದ್ಧೆಯ ಮನೋಭಿಲಾಷೆಯನ್ನು ಪೂರ್ಣಗೊಳಿಸಲು ತಮ್ಮ ಕೃಪೆಯ ಕಟಾಕ್ಷವನ್ನು ಬೀರಿದರು. ಇದು ಅವರ ಕರುಣಾಪೂರ್ಣ ವ್ಯಕ್ತಿತ್ವವನ್ನು ಸೂಚಿಸುವ ಮೊದಲ ಘಟನೆ.

> ಭಗವಂತನ ಕರುಣೆಯೇ ಮಾನುಷರೂಪವಾಗಿ ಹರಿದು ಬರುವುದೆಂದು ಶಾಸ್ತ್ರಗಳಲ್ಲಿ ವಿವರಿಸಲಾಗಿದೆ. ಅದನ್ನೇ ಅವತಾರ ಎಂದು ಕರೆಯುವುದು. ರಾಮಕೃಷ್ಣಾವತಾರದಲ್ಲಿ ಈ ಕರುಣೆಯು ಹೇಗೆ ಪ್ರಕಟವಾಯಿತು ಎಂಬುದನ್ನು ಹೃದಯಂಗಮವಾದ ಘಟನೆಗಳ ಮೂಲಕ ನಿರೂಪಿಸಿರುವ ಸ್ವಾಮೀಜಿಯವರು ಬೆಂಗಳೂರಿನ ಹಲಸೂರಿನ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

೨. ಗಿರೀಶನ ಮೇಲೆ ಶ್ರೀರಾಮಕೃಷ್ಣರು ಹರಿಸಿದ ಕರುಣೆ ಅಸದೃಶವಾದುದು. ಒಮ್ಮೆ ಪರಮಹಂಸರು ಗಿರೀಶನ ನಾಟಕ ನೋಡಲು ಹೋಗಿದ್ದಾಗ ಗಿರೀಶನು ಮದ್ಯದ ಅಮಲಿನಲ್ಲಿ ಇದ್ದ. ಮತ್ತಿನ ಪ್ರಚೋದನೆಯಿಂದ ಶ್ರೀರಾಮಕೃಷ್ಣರನ್ನು ಮನ ಬಂದಂತೆ ಅವಾಚ್ಯಶಬ್ದಗಳಿಂದ ಬಹಳ ನಿಷ್ಠುರವಾಗಿ ಬೈದ. ಅಲ್ಲಿದ್ದ ಭಕ್ತರಿಗೆ ಆಭಾಸವಾಯಿತು. ಶ್ರೀರಾಮಕೃಷ್ಣರು ಭಕ್ತರೊಡನೆ ದಕ್ಷಿಣೇಶ್ವರಕ್ಕೆ ತೆರಳಿದರು. ಮರುದಿನ ಗಿರೀಶನ ಅಮಲು ಇಳಿದಿತ್ತು; ಆದರೆ ತನ್ನ ದುಷ್ಟತನವನ್ನು ನೆನೆ ನೆನೆದು, ಪಶ್ಚಾತ್ತಾಪದ ಉರಿಯಲ್ಲಿ ಬೆಂದು ನರಳುತ್ತಿದ್ದ. ಈ ಸಂದರ್ಭ ಬಹಳ ರೋಮಾಂಚಕಾರಿಯಾದುದು. ಮರುದಿನ ಪರಮಹಂಸರು ಗಿರೀಶನ ಮನೆಯ

ಮುಂದೆ ಬಂದು ಗಾಡಿಯಿಂದ ಇಳಿಯುತ್ತಿದ್ದಾರೆ. ಕೊರಗಿನಿಂದ ಬೆಂದ ಕಣ್ಣುಗಳಿಂದ ಗಿರೀಶ ಅದನ್ನು ನೋಡಿ ತನ್ನ ದೃಷ್ಟಿಯನ್ನೇ ತಾನು ನಂಬದವನಾಗಿ, ಮಹದಾಶ್ಚರ್ಯಪಟ್ಟು ಹೇಳುತ್ತಾನೆ: "ನೀವು ನಿಜವಾದ ಅವತಾರಪುರುಷರು. ನಾನೆಷ್ಟೇ ಹೀನಾಯವಾಗಿ ನೆನ್ನೆ ವರ್ತಿಸಿದ್ದರೂ ಇಂದು ನನ್ನನ್ನು ನೋಡಲು ಬಂದಿದ್ದೀರಿ. ಬಂದಿಲ್ಲದಿದ್ದರೆ ನಾನು ತಿಳಿಯುತ್ತಿದ್ದೆ, ನಿಮಗೆ ಪರಮಜ್ಞಾನ ಪ್ರಾಪ್ತವಾಗಿಲ್ಲವೆಂದು. ಆದರೆ ಹೊಗಳಿಕೆ ಮತ್ತು ತೆಗಳಿಕೆಗಳನ್ನು ಸಮಾನವಾಗಿ ಸ್ವೀಕರಿಸಿರುವ ಮಹಾತ್ಮರು ನೀವು." ಪರಮಹಂಸರ ಕರುಣಾಗಂಗೆಯ ವಿಸ್ತಾರವು ಅಸದಳವೆಂದು ನಾವು ಈ ಸನ್ನಿವೇಶ ದಿಂದ ತಿಳಿಯಬಹುದು.

೩. ಇನ್ನೊಂದು ದಿನ, ಶ್ರೀರಾಮಕೃಷ್ಣರ ಭಕ್ತರು ಅವರಿಗೆ ಸಲ್ಲಿಸುವ ಸೇವೆಯನ್ನು ಗಿರೀಶನು ಕಣ್ಣಾರೆ ಕಂಡಾಗ, ತಾನೂ ಹಾಗೆ ಸೇವೆ ಸಲ್ಲಿಸಲು ಸಾಧ್ಯವಿಲ್ಲವಲ್ಲ ಎಂದು ಬಹಳ ನೊಂದು, ತನ್ನ ಮನೆಯಲ್ಲಿಯೇ ಏಕಾಂಗಿಯಾಗಿ ಕುಳಿತು ಚಿಂತಿಸುತ್ತಿರುತ್ತಾನೆ. "ಪರಮಹಂಸರು ನಮ್ಮ ಮನೆಗೆ ಬರುತ್ತಾರೆಯೇ, ನನ್ನ ಸತ್ಕಾರವನ್ನು ಸ್ವೀಕರಿಸುತ್ತಾರೆಯೇ, ಅವರು ಬಂದರೆ ಅವರನ್ನು ಯಾವ ರೀತಿ ಸತ್ಕರಿಸುವುದು? ನಾನೆಂತಹ ನಿಸ್ಸಹಾಯಕ, ನನಗೆ ಅವರನ್ನು ಮನೆಗೆ ಕರೆದು ಸೇವೆ ಮಾಡುವ ಭಾಗ್ಯವಿಲ್ಲವಲ್ಲ!" – ಎಂದೆಲ್ಲಾ ಕೊರಗುತ್ತಾ ಅವನು ಮಂಚದ ಮೇಲೆ ಕಣ್ಣೀರು ಸುರಿಸುತ್ತ ಮಲಗಿರುತ್ತಾನೆ. ಮಧ್ಯಾಹ್ನ ಸುಮಾರು ೧.೩೦ ಗಂಟೆಗೆ ಯಾರೋ ಬಾಗಿಲನ್ನು ತಟ್ಟಿದ ಶಬ್ದವಾಗುತ್ತದೆ. ಅಂದು ಪರಮಹಂಸರು ಭಕ್ತ ಬಲರಾಮ ಬೋಸನ ಮನೆಯಲ್ಲಿ ನಡೆದ ಸತ್ಸಂಗಕ್ಕೆ ಬಂದಿದ್ದರು. ಮಧ್ಯಾಹ್ನದ ಊಟವನ್ನು ಅಲ್ಲಿಯೇ ಮುಗಿಸಿ, ದಕ್ಷಿಣೇಶ್ವರಕ್ಕೆ ತೆರಳುವ ಮೊದಲು ಇವನ ಮನೆಗೆ ಬಂದರು. ಭಕ್ತರ ಮನಸ್ಸಿನ ಅಂತರಂಗವನ್ನು ಅರಿತ ಕರುಣಾಳುವಾದ ಶ್ರೀರಾಮಕೃಷ್ಣರು ಗಿರೀಶನ ಮನೆಯ ಬಾಗಿಲನ್ನು ತಟ್ಟಿದರು. ಶ್ರೀಕೃಷ್ಣ ವಿದುರನ ಮನೆಗೆ ಬಂದಂತೆ ಆಯಿತು. ಬಾಗಿಲು ತಟ್ಟಿದ ಶಬ್ದ ಕೇಳಿ ಗಿರೀಶ ಬಾಗಿಲನ್ನು ತೆಗೆದು ನೋಡುತ್ತಾನೆ, ಸಾಕ್ಷಾತ್ ಪರಮಹಂಸರೇ ಬಾಗಿಲಲ್ಲಿ ನಿಂತಿದ್ದಾರೆ! "ಗಿರೀಶ, ತಿನ್ನಲು ಏನಾದರೂ ಇದೆಯೇ? ನನಗೆ ಹೊಟ್ಟೆ ಹಸಿಯುತ್ತಿದೆ" ಎನ್ನುತ್ತಾರೆ. ಸ್ವಲ್ಪ ಸಮಯಕ್ಕೆ ಮುಂಚೆಯೇ ಬಲರಾಮ್ ಬೋಸನ ಮನೆಯಲ್ಲಿ ಊಟಮಾಡಿ ಬಂದಿದ್ದರೂ ಭಕ್ತ ಗಿರೀಶನ ಮನೋಭಿಲಾಷೆಯನ್ನು ಪೂರ್ಣ ಗೊಳಿಸಲು ಹೀಗೆ ಕೇಳುತ್ತಾರೆ. ಗಿರೀಶನ ಮನೆಯಲ್ಲಿ ಕೊಡಲು ಏನೂ ಇರಲಿಲ್ಲ, ಇವರನ್ನು ಕೂಡಿಸಿ, ಗಿರೀಶ ಹೊರಗಿಂದ ಸ್ವಲ್ಪ ತಿನಿಸನ್ನು ತಂದು ಕೊಡುತ್ತಾನೆ. ಪರಮಹಂಸರು ಬಹಳ ಆನಂದದಿಂದ, ಅವನು ತಂದ ತಿಂಡಿಯನ್ನು ಪ್ರಶಂಸಿಸುತ್ತಾರೆ. ಈ ಬಗೆಯಲ್ಲಿ ಈ ಕರುಣಾಮೂರ್ತಿಯ ಲೀಲೆ ಹೃದಯಂಗಮ ವಾದುದು.

೪. ಪ್ರತಾಪಚಂದ್ರ ಹಾಜರಾ ಪರಮಹಂಸರ ಲೀಲಾವತಾರ ದಲ್ಲಿ ಒಬ್ಬ ಆಷಾಢಭೂತಿ ಸಾಧಕನ ಪಾತ್ರವನ್ನು ಬಹಳ ಚೆನ್ನಾಗಿ ನಿರ್ವಹಿಸಿದ್ದಾನೆ. ಹಾಜರಾ ಮಹಾಶಯನು ಪರಮಹಂಸರನ್ನು ಕುರಿತು ಒಮ್ಮೆ, "ನಮ್ಮ ಪ್ರಾರ್ಥನೆ ಭಗವಂತನಿಗೆ ಕೇಳಿಸುವುದೇ?" ಎಂದು ಪ್ರಶ್ನಿಸುತ್ತಾನೆ. ಪರಮಹಂಸರು ನಮ್ಮ ಪ್ರಾರ್ಥನೆ ಪ್ರಾಮಾಣಿಕವಾಗಿದ್ದು, ವ್ಯಾಕುಲತೆಯಿಂದ ಕೂಡಿದ್ದರೆ ಖಂಡಿತ ಭಗವಂತ ಅದಕ್ಕೆ ಓಗೊಡುತ್ತಾನೆ ಎಂದು ಮನಮುಟ್ಟು ವಂತೆ ಹೇಳುತ್ತಾರೆ. ಆಗ ಹಾಜರಾ ವಿನಯದಿಂದ ಪರಮಹಂಸರ ಪಾದವನ್ನು ಸ್ಪರ್ಶಿಸಿ ಪ್ರಣಾಮ ಮಾಡಲು ಹೋದಾಗ, ಶ್ರೀರಾಮಕೃಷ್ಣರು ತಮ್ಮ ಪಾದಗಳನ್ನು ಹಿಂತೆಗೆದುಕೊಳ್ಳುತ್ತಾರೆ, ಮುಟ್ಟಿಸಿಕೊಳ್ಳುವುದಿಲ್ಲ. ಹಾಜರಾ ಮಹಾಶಯನಿಗೆ ಅರ್ಥ ವಾಗುತ್ತದೆ, ಪರಮಹಂಸರ ಸೇವೆ ಮಾಡಲು ಅಥವಾ ಅವರನ್ನು ಮುಟ್ಟಲು ತಾನು ಶ್ರದ್ಧೆಯನ್ನು ಸಂಪಾದಿಸಬೇಕು ಎಂದು. ತನಗೆ ಪವಿತ್ರತೆ ಸಾಲದೆಂದು, ನೊಂದ ಮನಸ್ಸಿನಿಂದ ಮನಶ್ಶುದ್ಧಿಗಾಗಿ ಭಗವಂತನಲ್ಲಿ ಪ್ರಾರ್ಥಿಸುತ್ತಾನೆ, ಜಪವನ್ನು ಪ್ರಾರಂಭಿಸುತ್ತಾನೆ ಮತ್ತು ಗಂಗೆಯ ಪವಿತ್ರ ಮೃತ್ತಿಕೆಯನ್ನು ಶುದ್ಧೀಕರಣಕ್ಕಾಗಿ ಸೇವಿಸುತ್ತಾನೆ. ಪರಮಹಂಸರು ಸರ್ವಜ್ಞರು. ಅವರು ಕರುಣೆಯಿಂದ ರಾತ್ರಿ ಸೊಳ್ಳೆಪರದೆಯೊಳಗೆ ಕುಳಿತು ಧ್ಯಾನಾಸಕ್ತನಾಗಿದ್ದ ಹಾಜರಾ ಮಹಾಶಯನ ಹತ್ತಿರ ಬಂದು, ಕೈ ಹಿಡಿದು ಕರೆತಂದು ತಮ್ಮ ಕೊಠಡಿಯಲ್ಲಿ ಕುಳ್ಳಿರಿಸಿಕೊಂಡು, "ನೋಡು, ನನಗೆ ಸ್ವಲ್ಪ ಕಾಲು ನೋಯುತ್ತಿದೆ. ಸ್ವಲ್ಪ ಒತ್ತುತ್ತೀಯಾ?" ಎಂದು ಹೇಳುತ್ತಾರೆ. ಹೀಗೆ ಹಾಜರಾನಿಗೆ ತಮ್ಮ ಸೇವೆ ಮಾಡುವ ಅವಕಾಶವನ್ನು ತಾವೇ ಕಲ್ಪಿಸಿಕೊಡುತ್ತಾರೆ. ಹೀಗಿದ್ದರು ಕರುಣಾಸಾಗರರಾದ ಶ್ರೀರಾಮ ಕೃಷ್ಣರು!

೫. ಇನ್ನೊಬ್ಬ ಭಕ್ತನಾದ ಅಕ್ಷಯಕುಮಾರ್ ಸೇನನ ಭಾವಮಂದಿರಕ್ಕೂ ಹರಿಯಿತು, ಈ ಕರುಣಾಮೂರ್ತಿಯ ಕರುಣಾ ಪ್ರವಾಹ. ಅವನು ಕೃಷ್ಣಭಕ್ತ. ಶ್ರೀರಾಮಕೃಷ್ಣರು ತನ್ನ ಎದೆಯನ್ನು ಮುಟ್ಟಿದರೆ, ತನ್ನ ಇಷ್ಟದೇವರ ದರ್ಶನವನ್ನು ಪಡೆಯಬಹುದೆಂಬ ದೃಢವಿಶ್ವಾಸ ಅವನಲ್ಲಿತ್ತು. ಇದಕ್ಕಾಗಿ ಅವನು ಬಹಳ ಕಾಲ ಕಾಯಬೇಕಾಯಿತು. ಕಾಲಕಳೆದಂತೆ ಆ ಸುದಿನ ಬಂದೇಬಿಟ್ಟಿತು. ಜನವರಿ ೧, ೧೮೮೬ ರ ಕಲ್ಪತರು ದಿನ, ಕಾಶೀಪುರ ಉದ್ಯಾನವನ ದಲ್ಲಿ ಶ್ರೀರಾಮಕೃಷ್ಣರು ಕೃಪಾವರ್ಷವನ್ನು ಹರಿಸಿದ ದಿನ. ಅಂದು ಅಕ್ಷಯನು ಸಂಪಿಗೆ ಹೂವಿನಿಂದ ಶ್ರೀರಾಮಕೃಷ್ಣರ ಪಾದಗಳನ್ನು ಪೂಜಿಸಿದನು; ನಂತರ ಅವರಿಗೆ ನಮಸ್ಕರಿಸಿ ದೂರದಿಂದಲೇ ಇತರ ಭಕ್ತರಿಗೆ ಅನುಗ್ರಹಿಸುತ್ತಿದ್ದ ಶ್ರೀರಾಮಕೃಷ್ಣರನ್ನೇ ನೋಡುತ್ತ ನಿಂತಿದ್ದನು. ಕಡೆಗೂ ಪರಮಹಂಸರ ಕರುಣಾಕಟಾಕ್ಷ ಅಕ್ಷಯಕುಮಾರ್ ಸೇನನ ಮೇಲೆ ಬಿದ್ದಿತು. ಪರಮಹಂಸರು "ಹೇ ಅಕ್ಷಯ, ಇತ್ತ ಬಾ" ಎಂದು ಕರೆದರು. ಆತ ಆ ಕ್ಷಣವೇ ಓಡೋಡಿ ಬಂದ. ಪರಮಹಂಸರು ಅವನ ಎದೆಯನ್ನು ಸ್ಪರ್ಶಿಸಿ, ಕಿವಿಯಲ್ಲಿ ಮಂತ್ರೋಚ್ಚಾರಣೆ ಮಾಡಿದರು. ಇದರ ಪರಿಣಾಮವಾಗಿ ಅವನಿಗೆ ಇಷ್ಟದೇವರ ದರ್ಶನವಾಯಿತು. ಭಾವೋನ್ಮತ್ತನಾದ ಅವನ ಕಣ್ಣುಗಳಿಂದ ಆನಂದಾಶ್ರು ಹರಿಯಿತು. ಅವನು ನೆಲದ ಮೇಲೆ ಕುಸಿದು ಬಿದ್ದ. ಕ್ಷಯರಹಿತ ಆನಂದದಲ್ಲಿ ಅಕ್ಷಯ ಮುಳುಗಿಹೋದ.

ಪಾಪಿ–ತಾಪಿಗಳನ್ನು ರಕ್ಷಿಸಲೆಂದೇ ಶ್ರೀರಾಮಕೃಷ್ಣರು ಅವತಾರವೆತ್ತಿದ್ದಾರೆ. ಪ್ರಾಮಾಣಿಕತೆಯಿಂದ ಅವರಡಿ ಆಶ್ರಯವನ್ನು ಪಡೆದವನ ಮೇಲೆ ಅವರು ಅನುಗ್ರಹ ಹಸ್ತವನ್ನು ಚಾಚಿ, ಅವರೆಲ್ಲರ ಪಾಪಗಳನ್ನು ಕಳೆಯುತ್ತಾರೆ. ಗುರುದೇವರ ದಿವ್ಯಸ್ಪರ್ಶದಿಂದ ಒಬ್ಬ ವ್ಯಕ್ತಿಯು ಒಡನೆಯೇ ಪಾಪರಹಿತನಾಗುವನು. ಯಾವುದು ಬಹು ಮುಖ್ಯ ಎಂದರೆ, ಅವರಲ್ಲಿ ನಿಸ್ಪೃಹವಾದ ಪ್ರೇಮ ಮತ್ತು ಸಂಪೂರ್ಣ ಶರಣಾಗತಿ. ಗಿರೀಶ್ ಚಂದ್ರ ಘೋಷನು ತನ್ನ ಜೀವನದ ಅಂತ್ಯಕಾಲದಲ್ಲಿ ಹೀಗೆ ಹೇಳುತ್ತಿದ್ದನು: "ನನ್ನ ಪಾಪಗಳನ್ನೆಲ್ಲ ಎಸೆಯಬಲ್ಲ ಇಷ್ಟೊಂದು ದೊಡ್ಡ ಹಳ್ಳವಿದೆ ಎಂದು ಗೊತ್ತಿದ್ದರೆ, ನಾನು ಇನ್ನೂ ಹೆಚ್ಚು ಪಾಪಗಳನ್ನು ಮಾಡುತ್ತಿದ್ದೇನೋ!" ಶ್ರೀರಾಮಕೃಷ್ಣರು ಅಂಥ ಮಮತಾಮೂರ್ತಿ; ಕರುಣೆಯ ಸಿಂಧು. –ಸ್ವಾಮಿ ಶಿವಾನಂದ

೬. ಕಾಶೀಪುರದ ತೋಟದ ಮನೆಯಲ್ಲಿ ಶ್ರೀರಾಮಕೃಷ್ಣರ ಲೀಲಾವಸಾನದ ಕಾಲದಲ್ಲಿ ನಡೆದ ಒಂದು ಘಟನೆ ಇದು. ಶಶಿ (ಮುಂದೆ ಸ್ವಾಮಿ ರಾಮಕೃಷ್ಣಾನಂದರು) ಎಲ್ಲವನ್ನೂ ಮರೆತು ಗುರುದೇವರ ಸೇವೆಯಲ್ಲಿ ಪೂರ್ಣವಾಗಿ ಮಗ್ನನಾಗಿದ್ದನು. ಅಂದು ಜಗನ್ನಾಥ ರಥೋತ್ಸವದ ದಿವಸ. ಕೊಲ್ಕತಾದಲ್ಲಿ ಉತ್ಸವಗಳು ನಡೆಯುತ್ತಿವೆ. ಶ್ರೀರಾಮಕೃಷ್ಣರು ಶಶಿಯನ್ನು ರಥೋತ್ಸವದಲ್ಲಿ ಭಾಗವಹಿಸುವಂತೆ ಹೇಳಿದರು. ಶಶಿ ಒಪ್ಪಲಿಲ್ಲ. ಆದರೂ ಬಿಡದೆ ಒತ್ತಾಯ ಮಾಡಿ ಕಳಿಸಿಕೊಟ್ಟರು. ಶಶಿ ಬಲವಂತಕ್ಕೆ ಕಟ್ಟುಬಿದ್ದು ಹೋಗಿ ಬಂದನು. ಬರುವಾಗ ರಥೋತ್ಸವದಲ್ಲಿ ಶ್ರೀರಾಮಕೃಷ್ಣರಿಗಾಗಿ ನಿಂಬೆಹಣ್ಣನ್ನು ಕತ್ತರಿಸಲು ಎರಡು ಹೊಸ ಚಾಕುಗಳನ್ನು ಖರೀದಿಸಿ ತಂದಿದ್ದನು. ಈ ಹೊಸ ಚಾಕುಗಳನ್ನು ನೋಡಿದ ಪರಮಹಂಸರು ಅತ್ಯಂತ ಸಂತೋಷಭರಿತರಾದರು; "ನೀನು ಇಂತಹ ಉತ್ಸವಗಳಲ್ಲಿ ಭಾಗವಹಿಸಬೇಕು ಮತ್ತು ಏನಾದರೂ ಸಾಮಾನನ್ನು ಖರೀದಿಸಬೇಕು" ಎಂದು ಹೇಳಿದರು. ಅದಕ್ಕೆ ಕಾರಣವನ್ನೂ ಅವರೇ ವಿವರಿಸಿದರು. ಇಂತಹ ಉತ್ಸವಗಳಲ್ಲಿ ಬಡಜನರು ನಾಲ್ಕಾರು ಕಾಸು ಸಂಪಾದಿಸಲು ವಿವಿಧ ಪದಾರ್ಥಗಳನ್ನು ತಂದಿರುತ್ತಾರೆ; ಅವರ ಮನಸ್ಸಿನಲ್ಲಿ ಆಸೆಯಿರುತ್ತದೆ, ಅವುಗಳನ್ನು ಮಾರಿ ಅಲ್ಪಸ್ವಲ್ಪ ಕಾಸು ಸಂಪಾದಿಸಬೇಕೆಂದು. ನಾವು ಅವರಿಗೆ ಪ್ರೋತ್ಸಾಹ ಕೊಡಬೇಕು. ಅದೆಷ್ಟು ಪುಟ್ಟದಾದರೂ ಪರವಾಗಿಲ್ಲ, ಏನಾದರೂ ವಸ್ತುವನ್ನು ಜಾತ್ರೆಗೆ ಹೋದಾಗ ಕೊಂಡುತರಬೇಕು. ಶ್ರೀರಾಮಕೃಷ್ಣರು ವ್ಯಾವಹಾರಿಕ ಜಗತ್ತಿನಲ್ಲಿಯೂ ಹೇಗೆ ತಮ್ಮ ಕರುಣಾಪೂರಿತ ದೃಷ್ಟಿಯನ್ನು ಬೀರುತ್ತಿದ್ದರೆಂದು ಇದರಿಂದ ತಿಳಿಯುತ್ತದೆ.

೭. ಕಾಶೀಪುರದ ಮನೆಯಲ್ಲಿ ವಾಸಿಸುವಾಗ ಮಾನಸಿಕವಾಗಿ ಅಸ್ವಸ್ಥವಾದ ಒಬ್ಬ ಮಹಿಳೆ ಶ್ರೀರಾಮಕೃಷ್ಣರ ದರ್ಶನಕ್ಕಾಗಿ ಬರುತ್ತಿದ್ದಳು. ಅವಳು ಯಾರ ಒಪ್ಪಿಗೆಗಾಗೂ ಕಾಯುತ್ತಿರಲಿಲ್ಲ. ಪರಮಹಂಸರ ವಿಶ್ರಾಂತಿಗೆ ಆಗಾಗ ಭಂಗ ತರುತ್ತಿದ್ದಳು. ಇದನ್ನರಿತ ಶಶಿ "ಇನ್ನೊಮ್ಮೆ ಬರಲಿ, ಅವಳನ್ನು ಓಡಿಸುತ್ತೇನೆ" ಎಂದು ಉದ್ಗಾರ ಮಾಡಿದನು. ಅದಕ್ಕೆ ಶ್ರೀರಾಮಕೃಷ್ಣರು ತುಂಬು ಸಹಾನುಭೂತಿಯಿಂದ, "ಬೇಡಪ್ಪ, ಹಾಗೆಂದಿಗೂ ಮಾಡಬೇಡ. ಆಕೆ ತನ್ನ ಪಾಡಿಗೆ ತಾನು ಬಂದು ಹೋಗುತ್ತಿರಲಿ" ಎಂದು ನುಡಿದರು. ಹೀಗೆ ಶ್ರೀರಾಮಕೃಷ್ಣರು ದಯಾರ್ದ್ರಹೃದಯರೂ, ಪ್ರೇಮಮಯರೂ, ಸಮದರ್ಶಿಗಳೂ ಆಗಿ ಕಂಡುಬರುತ್ತಾರೆ.

೮. ಜನರು ದೇವರನ್ನು ಕೇವಲ ಭಕ್ತಿಗಾಗಿ ಅಥವಾ ಮುಕ್ತಿಗಾಗಿ ಮಾತ್ರ ಪ್ರಾರ್ಥಿಸುವುದಿಲ್ಲ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳುತ್ತಾನೆ:

**ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ ।**
**ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥** (೭.೧೬)

ಸಂಕಟಕ್ಕೆ ಒಳಗಾದವನು **ಆರ್ತ**; ಭಗವಂತನನ್ನು ತಿಳಿದುಕೊಳ್ಳಲು ಪ್ರಯತ್ನಿಸುವವನು **ಜಿಜ್ಞಾಸು**; ಧನವನ್ನು ಬಯಸುವವನು **ಅರ್ಥಾರ್ಥಿ**; ತತ್ತ್ವವನ್ನು ಅರಿಯಲು ಇಚ್ಛಿಸುವವನು **ಜ್ಞಾನಿ** – ಹೀಗೆ ಎಲ್ಲರೂ ಅವರವರ ಯೋಗ್ಯತಾನುಸಾರ ಭಗವಂತನ ಕರುಣೆಯನ್ನು ಹೊಂದುತ್ತಾರೆ. ಈಗ ಅರ್ಥಾರ್ಥಿ ಅಂದರೆ ಹಣಕ್ಕಾಗಿ ಆಸೆಪಟ್ಟ ಭಕ್ತನಾದ ಉಪೇಂದ್ರನಾಥ ಮುಖ್ಯೋಪಾಧ್ಯಾಯನ ಬಗ್ಗೆ ತಿಳಿಯೋಣ. ಉಪೇಂದ್ರ ಆಗರ್ಭ ಶ್ರೀಮಂತನಾಗಬೇಕೆಂಬ ಉತ್ಕಟೇಚ್ಛೆಯಿದ್ದ ಯುವಕ. ಇವನಿಗೆ ಹೇಗೋ ತಿಳಿದಿತ್ತು, ಮಹಾಪುರುಷರ ಸೇವೆ ಮಾಡಿದರೆ ಈ ಸಂಕಲ್ಪ ಸಿದ್ಧಿಸುವುದೆಂದು. ಈ ನಂಬಿಕೆಯಿಂದ ಪರಮಹಂಸರನ್ನು ನೋಡಲು ಆಗಾಗ ದಕ್ಷಿಣೇಶ್ವರಕ್ಕೆ ಹೋಗುತ್ತಿದ್ದ; ಕೈಯಲ್ಲಿ ಸ್ವಲ್ಪ ಸಿಹಿತಿಂಡಿಯನ್ನು ಕಟ್ಟಿಸಿಕೊಂಡು ಬಂದು ಪರಮಹಂಸರಿಗೆ ನೀಡುತ್ತಿದ್ದ. ಆದರೆ ಅವರು ಅದನ್ನು ಸ್ವಲ್ಪವೂ ತಿನ್ನುತ್ತಿರಲಿಲ್ಲ. ಉಪೇಂದ್ರನಿಗೆ ಇದರಿಂದ ಅಸಮಾಧಾನವಾಗುತ್ತಿತ್ತು. ಬೇರೆ ಭಕ್ತರ ಮುಖಾಂತರ ಪರಮಹಂಸರಿಗೆ, ತಾನು ತಂದ ತಿಂಡಿಯನ್ನು ಸ್ವೀಕಾರಮಾಡುವಂತೆ ಹೇಳಿಸಿದ. ಶಶಿ ಕೂಡ ಉಪೇಂದ್ರನ ಪರವಾಗಿ ವಾದಿಸಿದ. ಅದರಂತೆ ಶ್ರೀರಾಮಕೃಷ್ಣರು, "ಈ ಬಡಹುಡುಗ ಶ್ರೀಮಂತನಾಗಬೇಕೆಂದು ಬಯಸಿದ್ದಾನೆ, ಅದನ್ನು ಈಡೇರಿಸೋಣ" ಎಂದುಕೊಂಡು ಸಿಹಿತಿಂಡಿಯನ್ನು ಸ್ವಲ್ಪವೇ ತಮ್ಮ ಬಾಯಲ್ಲಿ ಹಾಕಿಕೊಂಡರು. ಅಂದಿನಿಂದ ಉಪೇಂದ್ರನ ಅದೃಷ್ಟ ಬದಲಾಯಿತು. ಮುಂದೆ ಅವನು ಕೊಲ್ಕತಾ ನಗರದ ಶ್ರೀಮಂತರಲ್ಲಿ ಒಬ್ಬನಾದ. ಪರಮಹಂಸರು ಎಲ್ಲಾ ಬಗೆಯ ಭಾವಗಳನ್ನೂ ಗ್ರಹಿಸಬಲ್ಲರು ಎಂದು ಈ ಘಟನೆಯಿಂದ ತಿಳಿದುಬರುತ್ತದೆ. ಭಕ್ತರ ಬಯಕೆಗೆ ತಕ್ಕಂತೆ, ಅವರವರ ಭಾವಕ್ಕೆ, ಅವರವರ ಭಕ್ತಿಗೆ ತಕ್ಕಂತೆ, ಶ್ರೀರಾಮಕೃಷ್ಣರು ತಮ್ಮ ಕಾರುಣ್ಯವನ್ನು ಹರಿಸಿದರು.

೯. 'ನಂಬಿ ಕೆಟ್ಟವರಿಲ್ಲವೋ ರಂಗಯ್ಯನ' ಎಂದು ಪುರಂದರ ದಾಸರು ಹಾಡಿದ್ದಾರಲ್ಲವೇ? ಈ ಮಾತಿಗೆ ನಿದರ್ಶನವಾಗಿ ಪ್ರಾಣಿಗಳು ಸಹ ಹೇಗೆ ಪರಮಹಂಸರ ಕರುಣಾರಸವನ್ನು ಸವಿದವು ಎಂದು ತೋರಿಸುವ ಘಟನೆಯೊಂದನ್ನು ನೋಡೋಣ. ನಿಸ್ತಾರಿಣಿ

ಘೋಷ್ ಎಂಬ ಭಕ್ತೆ ಸೋದರಿ ದೇವಮಾತೆಗೆ ಹೇಳಿದ ಸಂಗತಿ ಇದು: ಶ್ರೀರಾಮಕೃಷ್ಣರ ಸ್ತ್ರೀಭಕ್ತರಲ್ಲಿ ನಿಸ್ತಾರಿಣಿ ದೇವಿಯೂ ಒಬ್ಬಳು. ಆಕೆ ಮತ್ತು ಆಕೆಯ ಪತಿ ನವಗೋಪಾಲ್ ಘೋಷ್ – ಇಬ್ಬರೂ ಪರಮಹಂಸರಿಗೆ ಅಚ್ಚುಮೆಚ್ಚು. ದಕ್ಷಿಣೇಶ್ವರದಲ್ಲಿರುವ ಶ್ರೀರಾಮಕೃಷ್ಣರ ಕೊಠಡಿಯಲ್ಲಿ ಒಂದು ತಾಯಿಬೆಕ್ಕು ತನ್ನ ಮರಿಗಳೊಂದಿಗೆ ಆಶ್ರಯವನ್ನು ಪಡೆದಿತ್ತು. ಕೆಲವೊಮ್ಮೆ ಪರಮ ಹಂಸರ ಹಾಸಿಗೆಯ ಮೇಲೆಯೂ ಮಲಗಿ ವಿಶ್ರಮಿಸುತ್ತಿತ್ತು; ಆಗಾಗ ಅವರ ಕಾಲಿನ ಹತ್ತಿರ ಸುಳಿದಾಡುತ್ತಿತ್ತು; ಯಾವ ಕಡೆ ಬೇಕಾದರೂ ಓಡಾಡುವ ಸ್ವಾತಂತ್ರ್ಯವನ್ನು ಪಡೆದಿತ್ತು. ನಿಸ್ತಾರಿಣಿ ಘೋಷ್ ಆಗಾಗ ದಕ್ಷಿಣೇಶ್ವರಕ್ಕೆ ಭೇಟಿ ಕೊಡುತ್ತಿದ್ದಳು. ಒಮ್ಮೆ ಶ್ರೀರಾಮಕೃಷ್ಣರು ಅವಳನ್ನು ಕುರಿತು, "ನನಗೊಂದು ಸಹಾಯ ಮಾಡುತ್ತೀಯಾ?" ಎಂದರು. ಆಕೆ "ಸಾಧ್ಯವಾದರೆ ಮಾಡುತ್ತೇನೆ" ಎಂದಳು. ಅದಕ್ಕೆ ಶ್ರೀರಾಮಕೃಷ್ಣರು ಹೀಗೆ ಹೇಳಿದರು: "ಈ ತಾಯಿಬೆಕ್ಕು ಮತ್ತು ಮರಿಗಳಿಗೆ ಈ ದೇವಸ್ಥಾನದಲ್ಲಿ ಸರಿಯಾದ ಸೌಕರ್ಯವಿಲ್ಲ. ಆದ್ದರಿಂದ ನೀನು ಇವುಗಳನ್ನು ಕರೆದುಕೊಂಡು ಹೋಗು. ಏಕೆಂದರೆ ಇವು ನನ್ನನ್ನು ಆಶ್ರಯಿಸಿವೆ. ಶರಣಾದವರನ್ನು ರಕ್ಷಿಸಬೇಕು" ಎಂದರು. ನಿಸ್ತಾರಿಣಿ ಘೋಷ್ ಅದಕ್ಕೆ ಒಪ್ಪಿ ಕರೆದೊಯ್ಯುವಾಗ, "ನೋಡು, ಇವುಗಳನ್ನು ಚೆನ್ನಾಗಿ ನೋಡಿ ಕೊಳ್ಳಬೇಕು. ಇವು ನನ್ನಲ್ಲಿ ಶರಣಾದವುಗಳು" ಎಂದರು.

೧೦. ಕಾಳೀಪದ ಘೋಷ್ ಒಮ್ಮೆ ದೋಣಿಯಲ್ಲಿ ಶ್ರೀರಾಮಕೃಷ್ಣರ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು, "ಸ್ವಾಮಿ, ಮುಕ್ತಿದಾಯಕರು ನೀವು. ನನ್ನ ಜೀವನವನ್ನು ದಯವಿಟ್ಟು ಉಳಿಸಿರಿ" ಎಂದು ಬೇಡಿಕೊಂಡನು. ಶ್ರೀರಾಮ ಕೃಷ್ಣರು, "ಭಗವಂತನ ಹೆಸರನ್ನು ಜಪಿಸು. ನಿನಗೆ ಮುಕ್ತಿ ಸಿಕ್ಕುವುದು" ಎಂದು ಹೇಳಿದರು. ಕಾಳೀಪದನು, "ಸ್ವಾಮಿ ನಾನು ಬಹಳ ಕೆಟ್ಟ ಮನುಷ್ಯ, ಕುಡುಕ. ಭಗವಂತನ ಹೆಸರು ಹೇಳುವುದಕ್ಕೂ ನನಗೆ ವ್ಯವಧಾನವಿಲ್ಲ. ನೀವು ಕೃಪಾಸಾಗರರು. ಯಾವ ಶಿಸ್ತಾಗಲಿ, ಒಳ್ಳೆಯ ಗುಣವಾಗಲಿ ಇಲ್ಲದ ಒಡ್ಡ ನಾನು. ನನ್ನ ಮೇಲೆ ಕೃಪೆಯಿಟ್ಟು ನೀವೇ ಕಾಪಾಡಬೇಕು" ಎಂದನು.

ಇಷ್ಟುಹೊತ್ತೂ ಕಾಳೀಪದನು ಶ್ರೀರಾಮಕೃಷ್ಣರ ಪಾದಗಳನ್ನು ಹಿಡಿದುಕೊಂಡೇ ಇದ್ದನು. ಶ್ರೀರಾಮಕೃಷ್ಣರಿಗೆ ಈ ವಿಚಿತ್ರ ಸನ್ನಿವೇಶದಿಂದ ಪಾರಾಗುವ ಹಾದಿಯೇ ತೋಚಲಿಲ್ಲ. ಆದ್ದರಿಂದ ಅವರು ಕಾಳೀಪದನಿಗೆ, ನಾಲಿಗೆ ಚಾಚಲು ಹೇಳಿ ಮಂತ್ರವೊಂದನ್ನು ಅದರ ಮೇಲೆ ಬರೆದರು. ಅದರಿಂದ ಕಾಳೀಪದನಿಗೆ ತೃಪ್ತಿಯಾಗಲಿಲ್ಲ. ಅವನು "ಇದು ನನಗೆ ಬೇಡ. ನಾನು ಈ ಲೋಕವನ್ನು ಬಿಡುವಾಗ, ಸುತ್ತಲೂ ಕತ್ತಲೆ ಆವರಿಸಿ ಕೊಳ್ಳುವುದು. ಈ ಭೀಕರ ಕತ್ತಲೆಯಿಂದಾಗಿ ನನ್ನ ಹೃದಯ ಭಯದಿಂದ ತುಂಬಿಹೋಗುವುದು. ಆಗ ನೀವು ಮಾತ್ರವೇ ನನ್ನನ್ನು ಕಾಪಾಡಬಲ್ಲಿರಿ. ನೀವು ಆಗ ಎಡಗೈಯಿಂದ ದೀಪ ವೊಂದನ್ನು ಹಿಡಿದುಕೊಂಡು, ಬಲಗೈಯಿಂದ ನನ್ನನ್ನು ಕೈಹಿಡಿದು ಕಾಪಾಡಬೇಕು. ನೀವು ನನ್ನ ಈ ಪ್ರಾರ್ಥನೆಯನ್ನು ನಡೆಸಿ ಕೊಡಬೇಕು" ಎಂದನು. ಕರುಣಾಳುವಾದ ಶ್ರೀರಾಮಕೃಷ್ಣರು "ಆಗಲಿ, ಹಾಗೇ ಆಗಲಿ. ನಿನ್ನ ಪ್ರಾರ್ಥನೆ ಸಲ್ಲುವುದು" ಎಂದರು. ಕಾಳೀಪದನ ಕಡೆಗಾಲದಲ್ಲಿ ಅವನ ಪ್ರಾರ್ಥನೆ ನೆರವೇರಿತು.

ಹೀಗೆ ಅನೇಕ ಘಟನೆಗಳು ಶ್ರೀರಾಮಕೃಷ್ಣರ ಜೀವನದಲ್ಲಿ ಆಗಿ ಹೋಗಿವೆ. ಈಗಲೂ ಕೂಡ ಯಾರು ಶ್ರೀರಾಮಕೃಷ್ಣರ ಮೇಲೆ ವಿಶ್ವಾಸವಿಟ್ಟು ನಡೆದುಕೊಳ್ಳುವರೋ, ಅವರೆಲ್ಲರೂ ಈ ಕರುಣೆಯನ್ನು ವಿವಿಧ ಬಗೆಗಳಲ್ಲಿ ಅನುಭವಿಸುತ್ತಲೇ ಇದ್ದಾರೆ. 'ಆಬ್ರಹ್ಮಕೀಟ ಜನನೀ' ಎಂದು ಜಗನ್ಮಾತೆಯ ಬಗ್ಗೆ ಹೇಳುವರು. ಪರಮಹಂಸರೂ ಹಾಗೆಯೇ; ಕೀಟದಿಂದ ಹಿಡಿದು ಬ್ರಹ್ಮದವರೆಗೆ ತಮ್ಮ ಕರುಣಾಗಂಗೆಯನ್ನು ಹರಿಸಿದ ಕರುಣಾಮೂರ್ತಿಗಳಾಗಿದ್ದಾರೆ.

ಶ್ರೀರಾಮಕೃಷ್ಣರು ಭವತಾರಿಣಿ ಕಾಳಿ ಮಂದಿರದಲ್ಲಿ ಇರುವಾಗ ಒಂದು ಘಟನೆ ನಡೆಯಿತು. ಮಧ್ಯಾಹ್ನದ ಸಮಯದಲ್ಲಿ ಪ್ರಸಾದ ಸ್ವೀಕರಿಸಲು ಬಡವರು, ಹಸಿದವರು, ದೀನರು ಎಲ್ಲರೂ ಕಾಳೀ ದೇವಸ್ಥಾನದ ಬಳಿ ಸೇರುತ್ತಿದ್ದರು; ಪ್ರಸಾದ ಸ್ವೀಕರಿಸಿ, ತೃಪ್ತಿಯಾಗಿ ಹೊರಟು ಹೋಗುತ್ತಿದ್ದರು, ಮನಃಪೂರ್ವಕವಾಗಿ ಅನ್ನದಾನದ ಸೇವಾಕರ್ತರನ್ನು ಅಭಿನಂದಿಸುತ್ತಿದ್ದರು. ಶ್ರೀರಾಮಕೃಷ್ಣರು ಒಂದು ಕಡೆ ನಿಂತುಕೊಂಡು ಈ ಪ್ರಸಾದಸ್ವೀಕಾರವನ್ನು ನೋಡುತ್ತಿದ್ದರು. ಒಂದು ದಿನ ಓರ್ವ ಅಸಹಾಯಕ ಮಹಿಳೆ, ಅತ್ಯಂತ ವೃದ್ಧಳಾಗಿದ್ದಾಳೆ, ಕೋಲೂರಿಕೊಂಡು ಪ್ರಸಾದ ಸ್ವೀಕರಿಸಲು ಬಂದಿದ್ದಳು. ಆದರೆ ಆಕೆ ಬರುವುದು ಸ್ವಲ್ಪ ತಡವಾಗಿದೆ. ಬಾಗಿಲು ಕಾಯುವವನು ಆಕೆಯನ್ನು ಒಳಗೆ ಬರದಂತೆ ತಡೆದಿದ್ದಾನೆ. ಆದರೆ ಆಕೆ ಬಹಳ ಹಸಿದಿದ್ದರಿಂದ ಒಳಗೆ ಪ್ರವೇಶ ಮಾಡಲು ಅನುಮತಿ ಬೇಡುತ್ತಿದ್ದಾಳೆ. ತುಂಬ ಕೋಪಗೊಂಡ ಬಾಗಿಲು ಕಾಯುವವನು ಆಕೆಯನ್ನು ನೂಕಿಬಿಟ್ಟ. ಅವಳು ವೃದ್ಧಳಾಗಿದ್ದರಿಂದ ಅಲ್ಲಿಯೇ ಕುಸಿದು ಕುಳಿತು ನೋವಿನಿಂದ ಅಳತೊಡಗಿದಳು. ಆಕೆಯ ರೋದನ ತಮ್ಮ ಕೊಠಡಿಯಲ್ಲಿ ಕುಳಿತಿದ್ದ ಶ್ರೀರಾಮಕೃಷ್ಣರ ಕಿವಿಗೂ ಕೇಳಿಸಿತು. ಆ ಅಳುವ ಧ್ವನಿಯನ್ನು ಕೇಳಿ ಶ್ರೀರಾಮಕೃಷ್ಣರು ಸಮಾಚಾರವೇನೆಂದು ಅಲ್ಲಿದ್ದವರನ್ನು ವಿಚಾರಿಸಿ, ಎಲ್ಲವನ್ನೂ ತಿಳಿದುಕೊಂಡು ಬಹು ದುಃಖಿತರಾದರು; ಕರುಣೆಯಿಂದ ಕಂಬನಿಗರೆಯಲಾರಂಭಿಸಿದರು. ಅವರ ಕಣ್ಣೀರು ನೆಲವನ್ನೆಲ್ಲಾ ತೋಯಿಸಿತ್ತು. ಅವರು ದುಃಖದಿಂದ ಈ ರೀತಿ ಉದ್ಗರಿಸಿದರು: "ಅಮ್ಮಾ ಇದು ನ್ಯಾಯವೇ? ಒಂದು ಹಿಡಿ ಅನ್ನಕ್ಕಾಗಿ ಆಕೆ ಅಷ್ಟು ಕಷ್ಟ ಪಡಬೇಕಾಯಿತೇ?" ಹೀಗೆನ್ನುತ್ತಾ ಜೋರಾಗಿ ಅಳುತ್ತಿದ್ದಾರೆ. ಅವರ ಇಡೀ ದೇಹ ದುಃಖದಿಂದ ನಡುಗುತ್ತಿದೆ. ಆಹಾ! ಎಂಥಹ ಅತಿಮಾನುಷ ಕರುಣೆ! ಬಡವರಿಗಾಗಿ, ದುಃಖಕಷ್ಟಗಳಿಂದ ನರಳುತ್ತಿರುವವರಿಗಾಗಿ, ಆ ನೋವನ್ನು ನಿಜವಾಗಿ ಅನುಭವಿಸುವವರಿಗಿಂತ, ಹೆಚ್ಚಿನ ನೋವನ್ನು ಶ್ರೀರಾಮಕೃಷ್ಣರು ಸ್ವತಃ ತಾವೇ ಅನುಭವಿಸುತ್ತಿದ್ದಾರೆ!

ಆಧಾರ: ಅಕ್ಷಯ ಕುಮಾರ ಸೇನರ 'ಶ್ರೀರಾಮಕೃಷ್ಣ ಪೂಂಥಿ'